ಕನ್ನಡ ವಿಮರ್ಶೆಗೆ ಹೊಸ ಹೊಳಹುಗಳನ್ನು ಕೊಟ್ಟ ಲೇಖಕಿ ಎಂ.ಎಸ್. ಆಶಾದೇವಿ ಬೆಂಗಳೂರಿನ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕಿ. ಎರಡು ದಶಕಗಳಿಂದ ಕನ್ನಡ ಚಿಂತನೆಯ ಎಲ್ಲೆಗಳನ್ನು ವಿಸ್ತರಿಸುತ್ತಿರುವ ಬರಹಗಾರ್ತಿ. ಕನ್ನಡ ಸಾಹಿತ್ಯವನ್ನು ಸ್ತ್ರೀವಾದಿ ತಾತ್ವಿಕತೆಯ ಹಿನ್ನೆಲೆಯಲ್ಲಿ ವಿಮರ್ಶಿಸುತ್ತಿರುವ, ಅದನ್ನು ಭಿನ್ನ ಓದುಗಳಿಗೆ ಒಳಗುಮಾಡಿದ ಲೇಖಕಿ ಕೂಡ. ಅವರ 'ಸ್ತ್ರೀಮತವನುತ್ತರಿಸಲಾಗದೇ?', 'ನಡುವೆ ಸುಳಿವ ಆತ್ಮ', 'ನಾರಿಕೇಳಾ', 'ಬೆಳಕಿಗಿಂತ ಬೆಳ್ಳಗೆ' ಕೃತಿಗಳು ಹೆಣ್ಣು ದೃಷ್ಟಿಕೋನದ ನಿಖರ, ಪ್ರಖರ ಚಿಂತನೆಗಳನ್ನು ಹೊಂದಿವೆ. ಸಾಹಿತ್ಯದ ಚಿಂತನೆಯನ್ನು ಭಿನ್ನವಾಗಿ, ಅನನ್ಯವಾಗಿ ಮಾಡುವ ಆಶಾದೇವಿ ಅವರೊಂದಿಗೆ **ಮಯೂರ**ಕ್ಕಾಗಿ **ಅಕ್ಷತಾ ಹುಂಚದಕಟ್ಟೆ** ನಡೆಸಿದ ಮಾತುಕತೆ ಇಲ್ಲಿದೆ.

# ಸ್ತ್ರೀವಾದ ಎಂಬುದು ಅಂತಃಕರಣದ ಚಲನೆ

## ಲೇಖಕಿ **ಎಂ.ಎಸ್. ಆಶಾದೇವಿ** ಸಂದರ್ಶನ

ಚಿತ್ರಗಳು: ಎಂ.ಎಸ್. ಮಂಜುನಾಥ್

◆ **ಸಾಮಾನ್ಯವಾಗಿ ಕವಿತೆ, ಕಥೆ, ಲಲಿತ ಪ್ರಬಂಧಗಳ ಮೂಲಕ ಎಲ್ಲರೂ ಬರಹದ ಬದುಕಿಗೆ ತೆರೆದುಕೊಳ್ಳುತ್ತಾರೆ. ಆದರೆ ನೀವು ಸ್ತ್ರೀವಾದಿ ವಿಮರ್ಶೆಯ ಮೂಲಕ ಬರಹ ಬದುಕಿಗೆ ತೆರೆದುಕೊಂಡವರು. ಇದು ಕಠಿಣವಾದ ಆಯ್ಕೆಯಲ್ಲವೇ? ನಿಮಗೆ ಈ ಆಯ್ಕೆಯೇ ಹಿತ ಎನಿಸಿದ್ದು ಹೇಗೆ?**

ಲೋಕಾರೂಢಿಗೆ ನಾನು ಅಪವಾದವೂ ಅಲ್ಲ; ಹೊರತಾದವಳೂ ಅಲ್ಲ. ಕವಿತೆ ಬರೆಯುವುದರ ಮೂಲಕವೇ ಬರವಣಿಗೆ ಶುರು ಮಾಡಿದವಳು ನಾನು. ಆದರದು ಹೈಸ್ಕೂಲಿನಲ್ಲಿ ಓದುವಾಗ. ಆಗ ಕವಿತೆ ಬರೆದ ಡೈರಿ ಈಗಲೂ ನನ್ನ ಬಳಿ ಇದೆ. ನನ್ನ ಮೇಷ್ಟ್ರ ಶುಭಾಶಯದ ಸಹಿಯೊಂದಿಗೆ. ಪಿಯುಸಿಗೆ ಬರುವ ಹೊತ್ತಿಗೆ ನಾನೊಂದು ಪ್ರಯತ್ನ ಶುರು ಮಾಡಿದ್ದೆ; ನಾನು ಓದಿದ ಪುಸ್ತಕಗಳ ಬಗ್ಗೆ ನನಗೇನು ಅನ್ನಿಸಿತು ಅಂತ ಬರೆದಿಡುತ್ತಿದ್ದೆ. ನಾನಾಗ ಓದಿದ ಹಿರೇಮಲ್ಲೂರು ಈಶ್ವರನ್ ಅವರ ಕೃತಿ, ದುರ್ಗಾಸ್ತಮಾನ, ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು ಹೀಗೆ ಆಗ ಓದಿದ ಹತ್ತಾರು ಪುಸ್ತಕಗಳ ಬಗ್ಗೆ, ನನಗೆ ಯಾಕೆ ಈ ಪುಸ್ತಕ ಇಷ್ಟವಾಯಿತು, ಈ ಪುಸ್ತಕದಲ್ಲಿ ಏನು ಇಷ್ಟವಾಗಲಿಲ್ಲ, ಈ ಪುಸ್ತಕದಲ್ಲಿ ಏನು ಕೊರತೆ ಇದೆ ಎಂದೆಲ್ಲ ಟಿಪ್ಪಣಿ ಬರೆದಿಡುತ್ತಿದ್ದೆ. ನನ್ನ ತಂದೆಯವರಿಗೆ ಸಾಹಿತ್ಯದಲ್ಲಿ ಅಗಾಧವಾದ ಆಸಕ್ತಿಯಿತ್ತು. ನಾನು ಓದಿದ ಪುಸ್ತಕಗಳ ಬಗ್ಗೆ ಅವರೊಂದಿಗೆ ಚರ್ಚೆಯನ್ನೂ ಮಾಡುತ್ತಿದ್ದೆ.